ತಾರೀಖು 3ನೆ ಜುಲೈ 1907.

ನಂ. 49—ಸ್ಯಾನಿಟರಿ 56-06—8, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸ್ಥಾಂತ್ರಿಕ ಜಾಡ್ಯಗಳಿಗೆ ಸಂಬಂಧಪಟ್ಟ ಶಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಕಂಟಿಗಾರನಹಳ್ಳಿ	ಕಡೂರು.
ಉಬ್ಬಿಹೆರೆ	ಚಿಕ್ಕಮಗಳೂರು.
ರಾಮದೇವರಹಳ್ಳಿ	ಡಿಟ್ಟೋ
ಮತ್ತವರ	ಡಿಟ್ಟೋ
ಕಲ್ಲಹಳ್ಳಿ	ಡಿಟ್ಟೋ
ಮಾಗಡಿ	ಡಿಟ್ಟೋ

ತಾರೀಖು 3ನೆ ಜುಲೈ 1907.

ನಂ. 51—ಸ್ಯಾನಿಟರಿ 21-06—145, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು. ಇಂದ.	ತಾರೀಖು. ಗೆ	ಅಧಿಕಾರ.
ಆದಿಕೃತ್ತಿಕೋತ್ಸವ.	ತಿರುತಣ್ಣಿ...	...	ದಕ್ಷಿಣ ಆರ್ಕಾಡು.	28—7—07	4—8—07	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1907ನೆ ಇಸವಿ ಜೂನ್ 26ನೆ ಮುರ್ಕುಂ 684ನೆ ಮೆಮೊ ಪ್ರಕಾರ.
				ಉಭಯ ದಿನಗಳೂ ಸೇರಿ.		
ಬಾಬಯ್ಯನ ಉರಸು.	ಪೆನುಗೊಂಡೆ.	ಪೆನುಗೊಂಡೆ.	ಅನಂತಪುರ.	16—7—07	27—7—07	ಡಿಟ್ಟೋ ನಂಬರ್ 686
				ಉಭಯ ದಿನಗಳೂ ಸೇರಿ.		

ತಾರೀಖು 25ನೆ ಜೂನ್ 1907.

ನಂ. ಜಿ. 8023—ಜೆ. ಎಂ. 344-06—3, ಮೈಸೂರು ಸೀಮೆಯೊಳಗೆ ಮತ್ತು ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ ಯಾ ದಂಡಿನ ಹೊರಗೆ ವಿವಾಹಗಳನ್ನು ಮಾಡಿಸುವದಕ್ಕೂ ವಿವಾಹದ ಸರ್ಟಿಫಿಕೇಟುಗಳನ್ನು ಕೊಡುವುದಕ್ಕೂ, ವೆಸ್ಲಿಯನ್ ಮಿಷನಿಗೆ ಸೇರಿದ ರೆವೆರೆಂಡ್ ಜಿ. ಸಿ. ವಾಕರ್ ಬಿ. ಎ., ಯವರಿಗೆ 1900ನೆ ಇಸವಿಯ ಫೆಬ್ರವರಿ 12ನೆ ತಾರೀಖಿನ 9201—267-92ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಕೊಟ್ಟಿದ್ದ ಲೈಸೆನ್ಸನ್ನು ಮೈಸೂರು ಶ್ರೀಮಂ ಮಹಾರಾಜರವರ ಸರ್ಕಾರದವರು 1872ನೆ ಇಸವಿಯ ಇಂಡಿಯಾ ದೇಶದ ಕ್ರೀಸ್ತರ ವಿವಾಹಾಚರಣೆಯನ್ನು ಕುರಿತ ಆಕ್ಟಿನ 6ನೆ ಮತ್ತು 9ನೆ ಪ್ರಕರಣಗಳ ಪ್ರಕಾರ ಇದರಿಂದ ರದ್ದು ಮಾಡಿರುತ್ತಾರೆ.

ತಾರೀಖು 26ನೆ ಜೂನ್ 1907.

ನಂ. ಜಿ. 8103—ಜೆ. ಎಂ. 344-06—5, ಇದರಿಂದ ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ :—1890ನೆ ಇಸವಿಯ ಆಗಸ್ಟು 6ನೆ ತಾರೀಖಿನ 175ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಮೈಸೂರು ಸೀಮೆಗೆ ವಿವಾಹದ ರಿಜಿಸ್ಟ್ರಾರುಗಳಾಗಿ ನೇಮಕ ಮಾಡಲ್ಪಟ್ಟ, ವೆಸ್ಲಿಯನ್ ಮಿಷನಿಗೆ ಸೇರಿದ ರೆವೆರೆಂಡ್ ಸ್ಯಾಮ್ಯುಯೆಲ್ ನೆತೇನಿಯಲ್ ಮತ್ತು ರೆವೆರೆಂಡ್ ಜಾರ್ಜ್ ಮಾರ್ಕ್ ಎಂಬವರು ಅಂಥಾ ಅಧಿಕಾರಗಳನ್ನು ನಡೆಸತಕ್ಕ ಅಗತ್ಯವಿರುವುದಿಲ್ಲವಾಗಿ, ವಿವಾಹದ ರಿಜಿಸ್ಟ್ರಾರುಗಳಾಗಿ ಅವರನ್ನು ನೇಮಕ ಮಾಡಿದುದನ್ನು ಇದರಿಂದ ರದ್ದು ಮಾಡಿದೆ.